# 15. ಶಕ್ತಿಯ ಆಕರಗಳು

**1. ಒಂದು ಉತ್ತಮ ಶಕ್ತಿಯ ಆಕರದ ಲಕ್ಷಣಗಳೇನು?**
* ಸುಲಭವಾಗಿ ದೊರೆಯಬೇಕು * ಸುಲಭವಾಗಿ ಸಂಗ್ರಹಿಸಲು ಮತ್ತು ಸಾಗಿಸಲು ಸಾಧ್ಯವಾಗುವಂತಿರಬೇಕು
* ಮಿತವ್ಯಯಕಾರಿಯಾಗಿರಬೇಕು * ದ್ರವ್ಯರಾಶಿ ಅಥವಾ ಘಟಕ ಪರಿಮಾಣಕ್ಕೆ ಹೆಚ್ಚು ಕೆಲಸ ಮಾಡಬೇಕು.

**2. ಉತ್ತಮ ಇಂಧನ ಎಂದರೇನು?**
ಸುಲಭವಾಗಿ ದೊರೆಯಬೇಕು, ಕಡಿಮೆ ನಿಷ್ಕಾಸ ಉತ್ಪತ್ತಿ ಮಾಡುವುದು, ಹೆಚ್ಚಿನ ಶಾಖ ಶಕ್ತಿ ಬಿಡುಗಡೆಮಾಡುವುದು, ಸಂಗ್ರಹಣೆ ಮತ್ತು ಸಾಗಾಣಿಕೆಗೆ ಸುಲಭವಾಗಿರಬೇಕು, ಈ ಎಲ್ಲಾ ಗುಣವಿರುವ ಇಂಧನ ಉತ್ತಮ ಇಂಧನ.

**3. ನಿಮ್ಮ ಆಹಾರವನ್ನು ಬಿಸಿಮಾಡಲು ಯಾವುದಾದರೂ ಶಕ್ತಿಯ ಆಕರವನ್ನು ಉಪಯೋಗಿಸುವುದಾದರೆ, ಯಾವುದನ್ನು ಆಯ್ಕೆ ಮಾಡುವಿರಿ ಮತ್ತು ಏಕೆ?**
ಕಡಿಮೆ ನಿಷ್ಕಾಸ ಉತ್ಪತ್ತಿ ಮಾಡುವುದು, ಹೆಚ್ಚಿನ ಶಾಖ ಶಕ್ತಿ ಬಿಡುಗಡೆಮಾಡುವುದು, ಸಂಗ್ರಹಣೆ ಮತ್ತು ಸಾಗಾಣಿಕೆಗೆ ಸುಲಭವಾಗಿರುವಂತಹ ಇಂಧನವನ್ನು ಆಯ್ಕೆ ಮಾಡಬೇಕು.

**4. ಪಳೆಯುಳಿಕೆ ಇಂಧನಗಳು ಎಂದರೇನು? ಉದಾ. ಕೊಡಿ.**
ಆದೀಮ ಜೀವಿಗಳ ಸತ್ತ ದೇಹಗಳು ಭೂಮಿಯಡಿಯಲ್ಲಿ ಸಿಲುಕಿ, ಅನೇಕ ರಾಸಾಯನಿಕ ಕ್ರಿಯೆಗೊಳಪಟ್ಟು (ಹುದುಗುವಿಕೆ) ಉಂಟಾದ ನೈಸರ್ಗಿಕ ಸಂಪನ್ಮೂಲಗಳನ್ನು ಪಳೆಯುಳಿಕೆ ಇಂಧನ ಎಂದು ಕರೆಯುವರು. ಉದಾ: ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ.

**5. ಪಳೆಯುಳಿಕೆ ಇಂಧನಗಳ ಅನಾನುಕೂಲಗಳಾವುವು?**
* ಇವುಗಳನ್ನು ನವಿಕರಿಸಲು ಸಾಧ್ಯವಿಲ್ಲ, * ಇವುಗಳ ದಹನ ಕ್ರಿಯೆಯಿಂದ ವಾಯುಮಾಲಿನ್ಯ ಉಂಟಾಗುತ್ತದೆ.
* ಇವುಗಳ ದಹನ ಕ್ರಿಯೆಯಲ್ಲಿ ಬಿಡುಗಡೆಯಾದ ನೈಟ್ರೋಜನ್ ಮತ್ತು ಸಲ್ಫರ್ ಆಕ್ಸೈಡ್‌ಗಳು ಆಮ್ಲಮಳೆಗೆ ಕಾರಣವಾಗುತ್ತವೆ.

**6. ನಾವು ಪರ್ಯಾಯ ಇಂದನಗಳತ್ತ ಗಮನ ಹರಿಸುವ ಅವಶ್ಯಕತೆ ಏನು?**
* ಶಕ್ತಿಯ ಬೇಡಿಕೆ ಹೆಚ್ಚುತ್ತಿದೆ, * ಪಳೆಯುಳಿಕೆ ಇಂಧನಗಳನ್ನು ನವೀಕರಿಸಲು ಸಾಧ್ಯವಿಲ್ಲ, * ಪಳೆಯುಳಿಕೆ ಇಂಧನಗಳ ಸಂಗ್ರಹ ವೇಗವಾಗಿ ಕ್ಷೀಣಿಸುತ್ತಿದೆ. ಈ ಕಾರಣಗಳಿಂದಾಗಿ ಪರ್ಯಾಯ ಇಂಧನ ಮೂಲಗಳತ್ತ ಗಮನಹರಿಸುವ ಅವಶ್ಯಕತೆ ಇದೆ.

**7. ನಮ್ಮ ಅನುಕೂಲತೆಗೆ ತಕ್ಕಂತೆ ಗಾಳಿ ಮತ್ತು ನೀರಿನ ಸಾಂಪ್ರದಾಯಿಕ ಬಳಕೆಯನ್ನು ಹೇಗೆ ಮಾರ್ಪಡಿಸಲಾಗಿದೆ?**
**ಪವನಶಕ್ತಿ:** ಗಂಟೆಗೆ 15ಕಿ.ಮೀ ವೇಗವಾಗಿ ಬೀಸುವ ಗಾಳಿಯಿಂದ ವಿದ್ಯುಚ್ಛಕ್ತಿ ಉತ್ಪಾದಿಸಲು ಗಾಳಿಯ ಪಂಕಗಳನ್ನು ಅಳವಡಿಸಿ ಪವನ ಕ್ಷೇತ್ರಗಳನ್ನು ನಿರ್ಮಿಸಲಾಗಿದೆ. ಇವುಗಳು ಪರಿಸರ ಸ್ನೇಹಿಯಾಗಿದ್ದು, ಮಾಲಿನ್ಯ ರಹಿತವಾಗಿವೆ.
**ಜಲಶಕ್ತಿ:** ಎತ್ತರವಾದ ಸ್ಥಳಗಳಲ್ಲಿ ಉಂಟಾಗುವ ಜಲಪಾತಗಳ ನೀರನ್ನು ಅಣಕಟ್ಟೆಗಳಲ್ಲಿ ಸಂಗ್ರಹಿಸಿ, ವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿದೆ.

**8. ಕಲ್ಲಿದ್ದಲಿನಿಂದ ವಿದ್ಯುಚ್ಚಕ್ತಿಯನ್ನು ಹೇಗೆ ಉತ್ಪಾದಿಸುವರು?**
ಗಣಿಗಾರಿಕೆ ಮಾಡಿ ತೆಗೆದ ಕಲ್ಲಿದ್ದಲ್ಲನ್ನು ಸಂಸ್ಕರಿಸಿ, ಉಷ್ಣ ವಿದ್ಯುತ್‌ಸ್ಥಾವರಗಳಲ್ಲಿ ಶಾಖದ ಆಕರವಾಗಿ ಬಳಸುವರು.
ಈ ಶಾಖದಿಂದ ನೀರನ್ನು ಕಾಸಿ, ನೀರಿನ ಹಬೆಯನ್ನು ಕೊಳವೆಗಳ ಮೂಲಕ ಹಾಯಿಸಿ, ಟರ್ಬೈನ್‌ಗಳನ್ನು ತಿರಗುವಂತೆ ಮಾಡಿ ವಿದ್ಯುಚ್ಚಕ್ತಿಯನ್ನು ಉತ್ಪಾದಿಸಲಾಗುತ್ತದೆ.

**9. ಜೈವಿಕ ಶಕ್ತಿ ಎಂದರೇನು?**
ಜೈವಿಕ ಮೂಲಗಳಿಂದ ಪಡೆದ ಶಕ್ತಿಯನ್ನು ಜೈವಿಕ ಶಕ್ತಿ ಎನ್ನುವರು, ಸಸ್ಯ ಮತ್ತು ಪ್ರಾಣಿಗಳ ತ್ಯಾಜ್ಯವು ಜೈವಿಕ ಶಕ್ತಿಯಾಗಿದೆ. ಇವುಗಳಿಂದ ಜೈವಿಕ/ಸಾವಯವ ಗೊಬ್ಬರ ತಯಾರಿಕೆ ಮತ್ತು ಜೈವಿಕ ಅನಿಲವನ್ನು ತಯಾರಿಸಲಾಗುತ್ತದೆ.

**10. ಜೈವಿಕ ಅನಿಲದ ಪ್ರಮುಖ ಘಟಕವನ್ನು ಹೆಸರಿಸಿ.** ಮೀಥೇನ್ ಅನಿಲವು ಜೈವಿಕ ಅನಿಲದ ಪ್ರಮುಖ ಘಟಕ.

**11. ಸೌರಕುಕ್ಕರ್‌ನ ಭಾಗಗಳ ಕಾರ್ಯಗಳನ್ನು ಹೆಸರಿಸಿ.**
ಸೌರಕುಕ್ಕರ್‌ಗಳ ಭಾಗಗಳೆಂದರೆ,
**ನಿಮ್ನದರ್ಪಣ/ಕನ್ನಡಿ:** ಸೌರಕಿರಣಗಳನ್ನು ಪೆಟ್ಟಿಗೆಯೊಳಕ್ಕೆ ಪ್ರತಿಫಲಿಸಲು, **ಗಾಜಿನ ಹಾಳೆ:** ಶಾಖ ವಿಕಿರಣಗಳನ್ನು ಪೆಟ್ಟಿಗೆಯೊಳಗೆ ಇರುವಂತೆ ಮಾಡಲು, **ಕಪ್ಪುಬಣ್ಣ:** ಶಾಖವನ್ನು ಹೀರಿಕೊಳ್ಳಲು.

**12. ಸೌರಫಲಕಗಳು ಎಂದರೇನು?** ಸೌರಕೋಶಗಳ ಸರಣಿ ಜೋಡಣೆಗೆ ಸೌರಫಲಕಗಳು ಎನ್ನುವರು.

**13. ಸೌರಕೋಶ ಎಂದರೇನು?** ಸೌರಶಕ್ತಿಯನ್ನು ವಿದ್ಯುತ್‌ಶಕ್ತಿಯಾಗಿ ಪರಿವರ್ತಿಸುವ ಸಾಧನಕ್ಕೆ ಸೌರಕೋಶ ಎನ್ನುವರು.
ಸೌರಕೋಶಗಳನ್ನು ತಯಾರಿಸಲು ಶುದ್ಧ ಸಿಲಿಕಾನ್ ಅಥವಾ ಜರ್ಮೇನಿಯಂ ಅನ್ನು ಬಳಸುವರು.
ಸೌರಕೋಶಗಳು ಕೃತಕ ಉಪಗ್ರಹಗಳ ಶಕ್ತಿಯ ಪ್ರಮುಖ ಆಕರಗಳಾಗಿವೆ.

1 ಚ.ಸೆಂ.ಮೀ. ವಿಸ್ತೀರ್ಣದ ಸೌರಕೋಶವು 0.5V ರಿಂದ 1 V ವೋಲ್ಟೇಜ್ ಉಂಟುಮಾಡುವುದರೊಂದಿಗೆ, 0.7W ವ್ಯಾಟ್‌ನಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ.

**14. ಸಾಗರದಿಂದ ಪಡೆಯಲಿರುವ ಶಕ್ತಿಯ ಮಿತಿಗಳಾವುವು?**

* ಸಮುದ್ರದ ತೆರೆದ ಭಾಗಕ್ಕೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟಲು ಸಿಗುವ ಜಾಗಗಳು ತುಂಬಾ ಕಡಿಮೆ
* ವಿದ್ಯುಚ್ಛಕ್ತಿ ಉತ್ಪಾದಿಸಲು ಸಮುದ್ರದ ಅಲೆಗಳು ಹೆಚ್ಚು ಶಕ್ತಿಯುತವಾಗಿರಬೇಕು
* ಸಮುದ್ರದ ಅಲೆಗಳಲ್ಲಿನ ಸಂಭಾವ್ಯ ಶಕ್ತಿ ಸಾಮರ್ಥ್ಯ ಕಡಿಮೆ ಮತ್ತು ಅದರ ವಾಣಿಜ್ಯ ಬಳಕೆ ಕಷ್ಟವಾಗಿದೆ.

**15. ಭೂಗರ್ಭ ಉಷ್ಣಶಕ್ತಿ ಎಂದರೇನು?**

ಭೂಗರ್ಭ ಪ್ರಕ್ರಿಯೆಗಳಿಂದಾಗಿ ಭೂಮಿಯ ಆಳದಲ್ಲಿನ ಶಿಲಾಪಾಕದ ಮೇಲ್ಮುಖ ತಳ್ಳಲ್ಪಡುವಿಕೆಯಿಂದ ಭೂಮಿಯ ಮಧ್ಯಭಾಗದಲ್ಲಿ ಸಂಗ್ರಹವಾಗಿರುವ ನೀರು ಉಷ್ಣತಾಣಗಳ ಸಂಪರ್ಕಕ್ಕೆ ಬಂದಾಗ ಬಿಸಿಯಾಗಿ ಹಬೆಯಾಗುತ್ತದೆ. ಇದನ್ನು ಭೂಗರ್ಭ ಉಷ್ಣಶಕ್ತಿ ಎನ್ನುವರು. ಈ ಹಬೆಯನ್ನು ಕೊಳವೆಗಳ ಮೂಲಕ ಟರ್ಬೈನ್‌ಗಳಿಗೆ ಹಾಯಿಸಿ ವಿದ್ಯುಚ್ಛಕ್ತಿ ಪಡೆಯುವರು.
ನ್ಯೂಜಿಲೆಂಡ್ ಮತ್ತು ಅಮೇರಿಕಾಗಳಲ್ಲಿ ಭೂಗರ್ಭ ಉಷ್ಣಸ್ಥಾವರಗಳು ಹೆಚ್ಚಾಗಿ ಕಂಡುಬರುತ್ತವೆ.

**16. ನ್ಯೂಕ್ಲೀಯ ಶಕ್ತಿಯ ಅನುಕೂಲಗಳೇನು?**

* ಕಡಿಮೆ ಇಂಧನದಿಂದ ಹೆಚ್ಚಿನ ಶಕ್ತಿ ಪಡೆಯಬಹುದು *ವಿದ್ಯುತ್‌ಕ್ರಿಯಾಕಾರಿಗಳನ್ನು ದೀರ್ಘಕಾಲದವರೆಗೆ ನಡೆಸಬಹುದು
* ಆಮ್ಲಮಳೆ, ಹಸಿರು ಮನೆ ಪರಿಣಾಮಗಳಿಗೆ ಕಾರಣವಾದ ಅನಿಲಗಳನ್ನು ಬಿಡುಗಡೆ ಮಾಡುವುದಿಲ್ಲ.

**17. ನ್ಯೂಕ್ಲೀಯ ಶಕ್ತಿಯ ಬಳಕೆಗೆ ಇರುವ ಸವಾಲುಗಳೇನು?**

* ನ್ಯೂಕ್ಲೀಯ ಶಕ್ತಿಯನ್ನು ಪಡೆಯುವಾಗ ವಿಕಿರಣಗಳು ಪರಿಸರಕ್ಕೆ ಬಿಡುಗಡೆಯಾಗುವ ಸಂಭವ ಹೆಚ್ಚು
* ಬಿಡುಗಡೆಯಾದ ನ್ಯೂಟ್ರಾನ್‌ಗಳು ಜೀವಿಗಳಲ್ಲಿ ಡಿಎನ್‌ಎ ಅಣುವಿಗೆ ಧಕ್ಕೆ ಉಂಟುಮಾಡಿ ಆನುವಂಶಿಕ ರೋಗಗಳಿಗೆ ಕಾರಣವಾಗಬಹುದು
* ಮನುಷ್ಯ ಮತ್ತು ಇತರ ಜೀವಿಗಳಲ್ಲಿ ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ವಿಕಿರಣಗಳು ಕಾರಣವಾಗುತ್ತವೆ.
* ನ್ಯೂಕ್ಲೀಯ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದು ಬಹಳ ಕಷ್ಟಕರವಾದದ್ದು.

**18. ಶಕ್ತಿಯ ಯಾವುದೇ ಆಕರವು ಮಾಲಿನ್ಯದಿಂದ ಮುಕ್ತವೇ? ಅಥವಾ ಏಕಿಲ್ಲ?**

ಶಕ್ತಿಯ ಯಾವುದೇ ಆಕರವು ಮಾಲಿನ್ಯದಿಂದ ಮುಕ್ತವಿಲ್ಲ. ಸೌರಶಕ್ತಿಯನ್ನು ಮಾಲಿನ್ಯ ರಹಿತವೆಂದರೂ ನಿರಂತರ ಸೌರಶಕ್ತಿಗಾಗಿ ಮರಗಳನ್ನು ಬಲಿಕೊಡಬೇಕಾಗುತ್ತದೆ. ಅಲೆಗಳ ಶಕ್ತಿಯನ್ನು ಬಳಸುವಾಗ ಯಂತ್ರಗಳು ಬೇಗನೆ ಹಾಳಾಗಬಹುದು. ಹಾಗಾಗಿ ಯಾವುದೇ ಶಕ್ತಿಯ ಬಳಕೆಯು ಮಾಲಿನ್ಯದಿಂದ ಮುಕ್ತವಿಲ್ಲ. ಆದರೆ ಮಾಲಿನ್ಯ ಪ್ರಮಾಣ ಬೇರೆಬೇರೆಯಾಗಿದೆ.

**19. ಹೈಡ್ರೋಜನ್ ಅನ್ನು ರಾಕೆಟ್‌ನಲ್ಲಿ ಶಕ್ತಿಮೂಲವಾಗಿ ಬಳಸಲಾಗಿದೆ. ನೀವು ಇದನ್ನು ಸಂಪೀಡಿತ ನೈಸರ್ಗಿಕ ಅನಿಲಕ್ಕಿಂತ ಸ್ವಚ್ಛ ಎಂದು ಪರಿಗಣಿಸುವಿರಾ? ಏಕೆ ಅಥವಾ ಏಕಿಲ್ಲ?**

ಹೈಡ್ರೋಜನ್ ನೈಸರ್ಗಿಕ ಅನಿಲಕ್ಕಿಂತ ಸ್ವಚ್ಛ ಇಂಧನ. ಕಾರಣ ಹೈಡ್ರೋಜನ್ ದಹನಕ್ರಿಯಗೆ ಒಳಗಾದಾಗ ಕೇವಲ ನೀರು ಉತ್ಪತ್ತಿಯಾಗುತ್ತದೆ. ಆದರೆ ನೈಸರ್ಗಿಕ ಅನಿಲ ದಹನಕ್ರಿಯೆಗೆ ಒಳಗಾದಾಗ ಕಾರ್ಬನ್‌ಡೈಆಕ್ಸೈಡ್ ಮತ್ತು ನೀರು ಬಿಡುಗಡೆಯಗುತ್ತದೆ. ಕಾರ್ಬನ್‌ಡೈಆಕ್ಸೈಡ್ ಹಸಿರು ಮನೆ ಪರಿಣಾಮಕ್ಕೆ ಕಾರಣವಾಗಿದೆ.

**20. ಸೌರಕೋಶಗಳ ವೈಜ್ಞಾನಿಕ ಹಾಗೂ ತಾಂತ್ರಿಕ ಅನ್ವಯಗಳನ್ನು ತಿಳಿಸಿ.**

* ಕೃತಕ ಉಪಗ್ರಹಗಳ ಹಾಗೂ ಬಾಹ್ಯಾಕಾಶ ಶೋಧಕಗಳಲ್ಲಿ ಬಳಸುವರು.
* ರೇಡಿಯೋ ಅಥವಾ ತಂತಿರಹಿತ ಸಂಪರ್ಕ ವ್ಯವಸ್ಥೆಗಳಲ್ಲಿ ಸೌರಕೋಶ ಬಳಸುತ್ತಾರೆ.
* ದೂರದರ್ಶನ ಪ್ರಸಾರ ಕೇಂದ್ರಗಳಲ್ಲಿ ಸೌರಫಲಕಗಳನ್ನು ಬಳಸುವರು.
* ಸಂಚಾರ ದೀಪಗಳು, ಟ್ರಾಫಿಕ್ ದೀಪಗಳು, ಕ್ಯಾಲ್ಕ್ಯುಲೇಟರ್‌ಗಳಲ್ಲಿ, ಹಲವಾರು ಆಟಿಕೆಗಳಲ್ಲಿ ಬಳಸುವರು.
* ಅಷ್ಟೇ ಅಲ್ಲದೆ ಇತ್ತೀಚಿನ ದಿನಗಳಲ್ಲಿ ಸೆಲ್‌ಫೋನ್ ನ ಬ್ಯಾಟರಿ ಚಾರ್ಜ್‌ಮಾಡಲು ಸೌರಕೋಶದಿಂದ ತಯಾರುಮಾಡಲಾದ ಮೊಬೈಲ್ ಸ್ಕ್ರೀನ್ ಗಾರ್ಡ್ ಕೂಡ ತಯಾರಾಗುತ್ತಿದೆ.

********************